ದಿನಾಂಕಃ 24-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎಂ ವಿ ವಕೀಲರಿಂದ**

ಎಷ್ಟು ವರ್ಷಗಳಿಂದ ಹಣದ ವ್ಯವಹಾರವನ್ನು ಮಾಡುತ್ತಿದ್ದೀರ ಎಂದರೆ ಸಾಕ್ಷಿ ನಾನು ಹಣದ ವ್ಯವಹಾರವನ್ನು ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಹಾಗೂ ಮರುಳೇಶನ ನಡುವೆ 2-3 ಬಾರಿ ಹಣಕಾಸಿನ ವ್ಯವಹಾರ ನಡೆದಿದೆ. ನಿರ್ದಿಷ್ಟ ದಿನಾಂಕ ನನಗೆ ಹೇಳಲಾಗುವುದಿಲ್ಲ. 2017, 2018, 2019 ರ ಸಾಲಿನಲ್ಲಿ ನಡೆದಿರುತ್ತದೆ. ಸದರಿ ಮರುಳೇಶವರು ನನ್ನಿಂದ ಮೊದಲು 2 ಲಕ್ಷ ರೂ.ಗಳನ್ನು ಮನೆ ಕಟ್ಟಲು ಪಡೆದಿದ್ದು, ನಂತರ 2019ರಲ್ಲಿ ಪೈಪ್ ಲೈನ್ ಮಾಡಿಸಲು 1 ಲಕ್ಷ ರೂ.ಗಳನ್ನು. ನಂತರ ಈ ದಾವೆಯಲ್ಲಿ ನಮೂದಿಸಿದ ಹಣವನ್ನು ನನ್ನಿಂದ ಸಾಲವಾಗಿ ಪಡೆದಿರುತ್ತಾರೆ. ಸದರಿ ಮರುಳೇಶನಿಗೆ ಸಾಲವನ್ನು ಕೊಡುವಾಗ ಆತನಿಂದ ಯಾವುದಾದರೂ ದಾಖಲಾತಿಯನ್ನು ಪಡೆದ್ದೀರ ಎಂದರೆ ಸಾಕ್ಷಿ ಆತ ನನ್ನ ಅಣ್ಣನ ಮಗನಾದ ಕಾರಣ ಯಾವುದೇ ದಾಖಲೆಯನ್ನು ಪಡೆದಿಲ್ಲ ಎಂದು ನುಡಿಯುತ್ತಾರೆ. ಸದರಿ ಮರುಳೇಶನು ಈ ದಾವೆಗೂ ಮುನ್ನ ನನ್ನಿಂದ ಪಡೆದ ಸಾಲದ ಹಣವನ್ನು ಮರುಪಾವತಿಸಿದ್ದಾರೆ ಎಂದರೆ ಸರಿ. ಸದರಿ ಮರುಳೇಶ ನನ್ನಿಂದ ಈ ಹಿಂದೆ ಪಡೆದ ಸಾಲಕ್ಕೆ ಯಾವುದೇ ದಾಖಲೆಯನ್ನು ಪಡೆಯದೆ ಇದ್ದರು ಸಹ ಈ ದಾವೆಯಲ್ಲಿ ನಮೂದಿಸಿದ 3 ಲಕ್ಷ ರೂ.ಗಳಿಗೆ ದಾಖಲೆಯನ್ನು ಏಕೆ ಪಡೆದಿದ್ದೀರಿ ಎಂದರೆ ಸಾಕ್ಷಿ ದೊಡ್ಡ ಮೊತ್ತದ ಹಣವನ್ನು ಆತ ಸಾಲವಾಗಿ ಕೇಳಿದ ಕಾರಣ ನಾನು ಬೇರೆಯವರಿಂದ ಸಾಲವನ್ನು ಪಡೆದು ನಿನಗೆ ಕೊಡುತ್ತೇನೆ ಎಂದು ಹೇಳಿದ ಕಾರಣ ನಿಪಿ-1 ರಂತೆ ದಾಖಲೆಯನ್ನು ಪಡದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನನ್ನ ವಾದಪತ್ರದಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಾಗಲಿ ನಮೂದಿಸಿಲ್ಲ.

ಮರುಳೇಶನು 3 ಲಕ್ಷ ಹಣವನ್ನು ನನ್ನ ಬಳಿ 15 ದಿನ ಮುಂಚಿತವಾಗಿ ಕೇಳಿದ್ದು , ನಾನು 15 ದಿನಗಳಲ್ಲಿ ಸದರಿ ಹಣವನ್ನು ಹೊಂದಿಸಿಕೊಟ್ಟಿರುತ್ತೇನೆ. ನಾನು ಸದರಿ ಹಣವನ್ನು ಪಾಂಡೊಮಟ್ಟಿ ವಾಸಿಯಾದ ಡಿ ಸಿ ಶಿವಕುಮಾರ ಎನ್ನುವವರಿಂದ ಸಾಲ ಪಡೆದು ಅದೇ ಹಣವನ್ನು ಈತನಿಗೆ ಕೊಟ್ಟಿರುತ್ತೇನೆ. ಸದರಿಯವರಿಂದ ನಾನು ಹಣ ಪಡೆದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಸದರಿ ಶಿವಕುಮಾರನಿಂದ ಪಡೆದ ಸಾಲವನ್ನು 2022 ರಲ್ಲಿ ನಾನು ಬಡ್ಡಿ ಸಮೇತ ತೀರಿಸಿರುತ್ತೇನೆ. ಸದರಿ ವಿಚಾರದ ಕುರಿತು ದಾವೆಯಲ್ಲಿ ನಮೂದಿಸಲು ನನಗೇನು ತೊಂದರೆಯಿರಲಿಲ್ಲ.

ಸದರಿ ಮರುಳೇಶ ನನ್ನ ಬಳಿ ಸಾಲವನ್ನು ಕೇಳಿದಾಗ ನನ್ನ ಬಳಿ ಅತನಿಗೆ ನೀಡಲು ಆತ ಕೇಳಿದಷ್ಟು ಹಣ ಇರಲಿಲ್ಲ ಎಂದರೆ ಸರಿ. ನಾನು ಸದರಿ ಮರುಳೇಶನಿಗೆ ನಗದು ಹಣವನ್ನು 2020 ರಲ್ಲಿ ಕೊಟ್ಟಿರುತ್ತೇನೆ. ಸದರಿ ಸಮಯಕ್ಕೆ ಲಕ್ಷ್ಮಿಸಾಗರದ ಮಂಜು ಮತ್ತು ತಿಪ್ಪಗೊಂಡನಹಳ್ಳಿ ವಾಸಿಯಾದ ರಾಜು ಎನ್ನುವವರು ಹಾಜರಿದ್ದರು. ಸದರಿವರು ನನಗೆ ಪರಿಚಯಸ್ಥರು. ಸದರಿಯವರನ್ನು ನಾನು ಕರೆಸಿಲ್ಲ, ಅವರೇ ಬಂದಿರುತ್ತಾರೆ. ನಿಪಿ-1 ನ್ನು ಸದರಿ ಮಂಜು ಮತ್ತು ರಾಜುರವರ ಸಮಕ್ಷಮ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-1ನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ, ಆದ ಕಾರಣ ನಿಪಿ-1ರ ಬಿಕ್ಲಂದಾರರ ಸಹಿ ಎಂದು ನಮೂದು ಇರುವ ಕಡೆ ಯಾರು ಸಹಿ ಮಾಡಿಲ್ಲ ಎಂದರೆ ಸರಿ. ಸದರಿ ಮರುಳೇಶನಿಗೆ ತುಮ್ ಕೋಸ್ ನಲ್ಲಿ ಖಾತೆಯಿದೆ ಎಂದರೆ ಸರಿ. ತುಮ್ ಕೋಸ್ ನಲ್ಲಿ ಅವರ ಅಡಿಕೆ ತೋಟಕ್ಕೆ ಸಂಬಂಧಿಸಿದ ವ್ಯವಹಾರವನ್ನು ಮಾಡುತ್ತಾರೆ ಎಂದರೆ ಸರಿ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ದಿಃ 29-12-2017ರ ತುಮ್ ಕೋಸ್ ಚನ್ನಗಿರಿಯ ಖಾತೆ ಸಂಖ್ಯೆ 4677ರ ರಶೀದಿಯಾಗಿದ್ದು ಸಾಕ್ಷಿ ಸದರಿ ಖಾತೆ ಮರುಳೇಶನಿಗೆ ಸಂಬಂಧಿಸಿದ್ದು ಎಂದು ನೋಡಿ ಒಪ್ಪಿದ ಕಾರಣ ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ಸದರಿ ತುಮ್ ಕೋಸ್ ನಲ್ಲಿ ಯಾವುದೇ ವ್ಯವಹಾರ ಮಾಡಿದರೂ ಸಹ ರಶೀದಿ ಕೊಡುತ್ತಾರೆ ಎಂದರೆ ಸರಿ. ಸದರಿ ರಶೀದಿಗೆ ಖಾತೆದಾರರ ಸಹಿ ಮಾಡಿ ಪಡೆಯಬೇಕು ಎಂದರೆ ಸರಿ. 2017-18 ನೇ ಸಾಲಿನಲ್ಲಿ ಮರುಳೇಶರವರು ಆರೋಗ್ಯದಿಂದ ಇದ್ದರು ಎಂದರೆ ಸರಿ. ಸದರಿ ನಿಪಿ-1 ನ್ನು ಮರುಳೇಶ ಮೃತಪಟ್ಟ ತರುವಾಯ ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1ರಲ್ಲಿ ಕಾಣಿಸುತ್ತಿರುವ ಸಹಿ ಮರುಳೇಶನದಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿನ ಸಹಿಯನ್ನು ಮತ್ತು ನಿಡಿ-1ರಲ್ಲಿ ಇರುವ ಮರುಳೇಶನ ಸಹಿಯನ್ನು ಕೈಬರಹದ ತಜ್ಞರ ಪರೀಕ್ಷೆಗೆ ಒಳಪಡಿಸಲು ನನಗೇನು ತೊಂದರೆಯಿಲ್ಲ.

ಸದರಿ ಮರುಳೇಶ ನನ್ನಿಂದ ಪಡೆದ ಹಣವನ್ನು 1 ರಿಂದ 2 ವರ್ಷಗಳ ಒಳಗಾಗಿ ಮರುಪಾವತಿಸುವುದಾಗಿ ಹೇಳಿದರು. ಸದರಿ ವಿಚಾರವನ್ನು ನನ್ನ ವಾದಪತ್ರದಲ್ಲಿ ನಮೂದಿಸಿಲ್ಲ. ಅದೇ ರೀತಿ ಮರುಳೇಶನ ಜೀವಂತವಿದ್ದಾಗ ಹಣವನ್ನು ಮರುಪಾವತಿಸುವಂತೆ ನಾನು ಕೇಳಿದ್ದೆ. ಸದರಿ ಹಣವನ್ನು ಮರುಪಾವತಿಸುವಂತೆ ನಾನು ಹಣ ಕೊಟ್ಟ ಒಂದು ವರ್ಷದ ಒಳಗೆ

ಕೇಳಿರುತ್ತೇನೆ. ಸದರಿ ಮರುಳೇಶನ ಬಳಿಯೂ ಸಹ ನಾನು ಸಾಲದ ಹಣವನ್ನು ಮರುಪಾವತಿಸಲು ಬೇಕು ಎಂಬ ವಿಚಾರವನ್ನು ನನ್ನ ವಾದಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ.

ನಾನು ಸದರಿ ಮರುಳೇಶನ ವಾರಸುದಾರರ ಮೇಲೆ 2 ದಾವೆಯನ್ನು ಹೂಡಿದ್ದು ಒಂದು 3ಲಕ್ಷದ ಮೊತ್ತದ ಪ್ರಸ್ತುತ ದಾವೆ, ಇನ್ನೊಂದು 2 ಲಕ್ಷ 25 ಸಾವಿರ ಮೊತ್ತದ ಅಸಲು ದಾವಾ ನಂ 442/2022ರ ಎಂದರೆ ಸರಿ.ಸದರಿ ಎರಡೂ ಹಣದ ವ್ಯವಹಾರಗಳಿಗೆ ಏಕೆ ಎರಡು ಪ್ರಾಮಿಸರಿ ಪತ್ರಗಳನು ಪಡೆದ್ದೀರಿ ಎಂದರೆ ಸಾಕ್ಷಿ ದೊಡ್ಡ ಮೊತ್ತವಾದ ಕಾರಣ 2 ಪ್ರಾಮಿಸರಿ ನೋಟುಗಳನ್ನು ಮಾಡಿಸಿಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ನಿಪಿ-1 ನ್ನು ನಾನು ಸಾಲ ಕೊಟ್ಟ ದಿನದಂದೇ ಬರೆದುಕೊಟ್ಟಿರುತ್ತಾನೆ. ಸದರಿ ನಿಪಿ-1 ನ್ನು ನಾನು ಚನ್ನಗಿರಿಗೆ ಬಂದು ಬರೆಸಿಕೊಂಡಿರುತ್ತೇನೆ. ನಿಪಿ-1 ರಲ್ಲಿ ಹಣ ಸಂದಾಯ ರಶೀದಿ ಮತುತ ಪ್ರಾಮಿಸರಿ ನೋಟು ಎರಡೂ ಒಟ್ಟಿಗೆ ಇದ್ದು ಅದರಲ್ಲಿ ಹಣ ಸಂದಾಯ ರಶೀದಿಯಲ್ಲಿನ ವ್ಯವಹಾರಗಳನ್ನು ಸಹ ನಮೂದಿಸಿದ್ದು ಸದರಿ ನಮೂದನ್ನು ಯಾವ ಉದ್ದೇಶಕ್ಕಾಗಿ ಮಾಡಿದ್ದೀರಿ ಎಂದರೆ ಸಾಕ್ಷಿ ಸದರಿ ಮರುಳೇಶನೇ ಅದನ್ನು ಬರೆದಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಸಮಯಕ್ಕೆ ಸದರಿ ಹಣ ಸಂದಾಯ ರಶೀದಿಯನು ಏಕೆ ತುಂಬಿದ್ದೀರಿ ಎಂದು ನಾನು ಅತನನ್ನು ಪ್ರಶ್ನಿಸಲಿಲ್ಲ. ನಿಪಿ-1 ನಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡಂತಹ ಬರೆದುಕೊಂಡ ಪತ್ರವಾಗಿದೆ ಎಂದರೆ ಸರಿಯಲ್ಲ. ಸದರಿ ನಿಪಿ-1 ನ್ನು ಮೃತ ಮರುಳೇಶ ಎಂದಿಗೂ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

ದಿಃ 15-05-2020 ಕೋರೋನಾ ವ್ಯಾಪಕವಾಗಿದ್ದ ಸಮಯ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೆಚ್ಚಿಗೆ ಇರಲಿಲ್ಲ ಎಂದ ನುಡಿಯುತ್ತಾರೆ, ಸದರಿ ಸಮಯಕ್ಕೆ ಲಾಕ್ ಡೌನ್ ಜಾರಿಯಲ್ಲಿದ್ದು ಯಾರು ಸಹ ಸ್ವತಂತ್ರವಾಗಿ ಓಡಾಡುವಂತೆ ಇರಲಿಲ್ಲ ಎಂದರೆ ಸಾಕ್ಷಿ ಮರುಳೇಶನೆ ಬರೆದುಕೊಟ್ಟ ಎಂದು ನುಡಿಯುತ್ತಾರೆ. ಲಾಕ್ ಡೌನ್ ಇದ್ದ ಕಾರಣ ನಾವು ಚನ್ನಗಿರಿಗೆ ಬಂದಿಲ್ಲ ಮತ್ತು ಅಂಗಡಿಗಳು ಯಾವುದೇ ವ್ಯವಹಾರ ಮಾಡುತ್ತಿರಲಿಲ್ಲ, ನಿಪಿ-1 ನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.